AUGUST 05, 2025

**AKASHAVANI - DHARWAD**

**PRADESH SAMACHARA (KANNADA) 7.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ಕೆರೆಗಳ ಹರವು ವಲಯದ, ವೈಜ್ಞಾನಿಕ ಅಧ್ಯಯನ, ಒಟ್ಟು ವಿಸ್ತೀರ್ಣ ನಿಗದಿಗೆ, ಕ್ರಮವಹಿಸಿದ, ಪ್ರಥಮ ರಾಜ್ಯ ಕರ್ನಾಟಕ.**

- **ಕೇಂದ್ರ ಪುರಸ್ಕೃತ, ಸ್ವದೇಶ ದರ್ಶನ ಹಾಗೂ ಪ್ರಸಾದ್ ಯೋಜನೆ; ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದ, ಪ್ರವಾಸಿ–ತೀರ್ಥ ಕ್ಷೇತ್ರಗಳ ಅಭಿವೃದ್ಧಿ.**

- **ಖಾದ್ಯ ಹಾಗೂ ಔಷಧ ಗುಣಮಟ್ಟ ತಪಾಸಣೆ: ಆರೋಗ್ಯ ಇಲಾಖೆಯಿಂದ, ಮಾಸಿಕ ಅಭಿಯಾನ.**

- **ಸಕಾಲ ಸೇವೆ; ವಿಜಯನಗರ ಜಿಲ್ಲೆ, ಅರ್ಜಿಗಳ ವಿಲೇವಾರಿಯಲ್ಲಿ, ರಾಜ್ಯಕ್ಕೆ ಪ್ರಥಮ ಸ್ಥಾನ.**

<><><>

**ಈಗ ವಾರ್ತೆಗಳ ವಿವರ**

<><><>

**ವೈಜ್ಞಾನಿಕವಾಗಿ, ಕೆರೆಗಳ ಹರವು ವಲಯದ ಅಧ್ಯಯನ ನಡೆಸಿ, ಒಟ್ಟು ವಿಸ್ತೀರ್ಣ ನಿಗದಿಪಡಿಸಲು, ಕ್ರಮ ಕೈಗೊಂಡ ಏಕೈಕ ರಾಜ್ಯ, ಕರ್ನಾಟಕ ಎಂದು, ಸಣ್ಣ ನೀರಾವರಿ ಖಾತೆ ಸಚಿವ, ಎನ್.ಎಸ್ ಬೋಸರಾಜು, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ರಾಜ್ಯ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ರಾಜ್ಯದ 41 ಸಾವಿರದ 849 ಕೆರೆಗಳು ಹಾಗೂ ಸಂಬಂಧಿತ, ರಾಜಕಾಲುವೆಗಳ ಅಧ್ಯಯನ ನಡೆಸುತ್ತಿದೆ. ಕೆರೆಗಳ ಹರವು–ಅಚ್ಚುಕಟ್ಟು ಪ್ರದೇಶ ತಿದ್ದುಪಡಿ ಪ್ರಸ್ತಾವ ಹೊಸದಾಗಿ**

ಜಾರಿಗೊಂಡಿದೆ. ಕೃಷಿ ಭೂಮಿಗೆ ನೀರಾವರಿ ಕಲ್ಪಿಸಲು, ಕೆರೆ ಹಾಗೂ ಕಾಲುವೆಗಳಿಗೆ, ತ್ಯಾಜ್ಯ ನೀರು ಸೇರುವುದನ್ನು ತಪ್ಪಿಸಿ, ಭೂಗಳ್ಳರಿಂದ ಕೆರೆ ರಕ್ಷಿಸಲು, ಹೊಸ ತಿದ್ದುಪಡಿ ಅವಕಾಶ ನೀಡಲಿದೆ ಎಂದಿದ್ದಾರೆ.

<><><>

ರಾಜ್ಯದಲ್ಲಿ ಐದು ಲಕ್ಷಕ್ಕೂ ಅಧಿಕ, ಅಸಂಘಟಿತ ವಲಯಗಳಿಗೆ ಸೇರಿದ, ಗಿಗ್‌ಕಾರ್ಮಿಕರಿದ್ದಾರೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಶಿವಮೊಗ್ಗದಲ್ಲಿ, ಕಟ್ಟಡ ನಿರ್ಮಾಣ ಕಾರ್ಮಿಕರ, ಶ್ರಮಿಕ ವಸತಿ ಭವನ ಹಾಗೂ ಜಿಲ್ಲೆಯ ವಿವಿಧ ವರ್ಗಗಳ, ಅಸಂಘಟಿತ ಕಾರ್ಮಿಕರಿಗೆ, ಸ್ಮಾರ್ಟ್ ಕಾರ್ಡ್ ವಿತರಿಸಿ, ಮಾತನಾಡಿದರು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಕಾರ್ಮಿಕರಿಗೆ, ಆಶಾದೀಪ ಯೋಜನೆ ಸಹಕಾರಿ ಎಂದರು. ಅಸಂಘಟಿತ ವಲಯದ ಕಾರ್ಮಿಕರಿಗೆ, ರಾಜ್ಯದಲ್ಲಿ ಪ್ರಥಮ ಬಾರಿಗೆ ಗಿಗ್ ಮಸೂದೆ, ಸಿನೆಮಾ ಕ್ಷೇತ್ರದ ಕಾರ್ಮಿಕರ ಹಿತ ರಕ್ಷಣೆಗಾಗಿ, ಸಿನೆ ಮಸೂದೆ, ವಾಣಿಜ್ಯ ಸರಕು ಸಾಗಣೆ ವಾಹನ ಚಾಲಕರು, ಕ್ಲೀನರ್ ಹಾಗೂ ಮೆಕ್ಯಾನಿಕ್ ಗಳ ಹಿತ ರಕ್ಷಣೆಗಾಗಿ, ಸಾರಿಗೆ ಮಸೂದೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದರು. ಅಪಘಾತ ಸಂಭವಿಸಿದಾಗ, ತುರ್ತು ಧನಸಹಾಯ, ಕಾರ್ಮಿಕ ಮೃತಪಟ್ಟಲ್ಲಿ 5 ಲಕ್ಷ ರೂಪಾಯಿ ಪರಿಹಾರ, ಕುಟುಂಬಕ್ಕೆ ಸಿಗಲಿದೆ ಎಂದು, ಸಚಿವ ಲಾಡ ಹೇಳಿದರು.

<><><>

ಕೇಂದ್ರ ಪುರಸ್ಕೃತ, ಎರಡನೇ ಆವೃತ್ತಿಯ, ಸ್ವದೇಶ ದರ್ಶನ, 'ಪಸಾದ' ಯೋಜನೆ ಹಾಗೂ ಬಂಡವಾಳ ಹೂಡಿಕೆ, ವಿಶೇಷ ನೆರವು ಯೋಜನೆ ಅಡಿ, ರಾಜ್ಯದಲ್ಲಿ ಅನುಷ್ಠಾನಗೊಳ್ಳಲಿವೆ ಎಂದು, ಕೇಂದ್ರ ಪ್ರವಾಸೋದ್ಯಮ ಖಾತೆ ಸಚಿವ, ಗಜೇಂದ್ರಸಿಂಗ್ ಶೇಖಾವತ್, ಲೋಕಸಭೆಗೆ ತಿಳಿಸಿದ್ದಾರೆ. ಉಡುಪಿ–ಚಿಕ್ಕಮಗಳೂರು ಸಂಸದ, ಕೋಟ ಶ್ರೀನಿವಾಸ ಪೂಜಾರಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೀದರ ಹಾಗೂ ಉಡುಪಿ ಸೇರಿದಂತೆ, ಕರ್ನಾಟಕದ ಸವಾಲಿನ ಗಮ್ಯ ತಾಣಗಳನ್ನು, ಹೊಸ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಯಡಿ ಗುರುತಿಸಲಾಗಿದೆ ಎಂದರು. ಬೆಳಗಾವಿ ಜಿಲ್ಲೆ, ಸವದತ್ತಿಯ ಶ್ರೀ ಯಲ್ಲಮ್ಮನ ಗುಡ್ಡದ ಅಭಿವೃದ್ಧಿಗೆ, 100 ಕೋಟಿ ರೂಪಾಯಿ, ಪ್ರಸಾದ್ ಯೋಜನೆಯಡಿ, ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ಅಭಿವೃದ್ಧಿಗೆ, 18 ಕೋಟಿ 37 ಲಕ್ಷ ರೂಪಾಯಿ, ಬೀದರ್ ಜಿಲ್ಲೆಯ ಪಾಪನಾಶ ದೇವಾಲಯದಲ್ಲಿ, ಮೂಲ ಸೌಕರ್ಯ ಒದಗಿಸಲು, 22 ಕೋಟಿ 25 ಲಕ್ಷ ರೂಪಾಯಿ, ಮಂಜೂರಾಗಿದೆ ಎಂದರು.

<><><>

ಆತ್ಮ ನಿರ್ಭರ ಭಾರತ, ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ ಅಡಿ, ಹುಬ್ಬಳ್ಳಿಯಲ್ಲಿ ಬೇಕರಿ ಉದ್ಯಮ ಆರಂಭಿಸಿ, ಸ್ವಾವಲಂಬಿಯಾಗಿದ್ದಾರೆ, ಧಾರವಾಡದ ಫಲಾನುಭವಿ, ರವೀಂದ್ರ ಕಾಡಮ್ಮನವರ. ಪ್ರದೇಶ ಸಮಾಚಾರಕ್ಕಾಗಿ, ಪಿಎಂ.ಎಫ್.ಎಂ.ಇ. ಯೋಜನೆ ಬಗ್ಗೆ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ರವೀಂದ್ರ ಕಾಡಮ್ಮನವರ ಧ್ವನಿ – 51 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ರಾಜ್ಯದಲ್ಲಿ ಖಾದ್ಯಗಳು ಹಾಗೂ ಔಷಧಿಗಳ ಗುಣಮಟ್ಟ ನಿರ್ಧರಿಸಲು, ಈ ತಿಂಗಳಲ್ಲಿ, ವಿಶೇಷ ತಪಾಸಣೆ ಆರೋಗ್ಯ ಇಲಾಖೆ ಆರಂಭಿಸಲಿದೆ ಎಂದು, ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಕಳೆದ ಜುಲೈ ತಿಂಗಳಲ್ಲಿ, 3 ಸಾವಿರದ 489 ಖಾದ್ಯ ಹಾಗೂ ಔಷಧಗಳ ಮಾದರಿಯನ್ನು ಪರಿಶೀಲಿಸಲಾಗಿದೆ. ಖಾದ್ಯ ವಸ್ತುಗಳಲ್ಲಿ 17 ಅಸುರಕ್ಷಿತ ಹಾಗೂ 18 ಔಷಧಗಳು ಕಳಪೆ ಗುಣಮಟ್ಟದ್ದಾಗಿವೆ ಎಂದು, ವರದಿ ತಿಳಿಸಿದೆ ಎಂದರು. ಇಲ್ಲಿಯ ತನಕ, ಒಟ್ಟು ಸಾವಿರದ 433 ಔಷಧಗಳಲ್ಲಿ, 59 ಕಳಪೆ ಗುಣಮಟ್ಟದವು ಎಂಬುದು ದೃಢಪಟ್ಟಿದೆ. 40 ಲಕ್ಷದ 48 ಸಾವಿರ ರೂಪಾಯಿ ಮೌಲ್ಯದ ಔಷಧಿಗಳನ್ನು, ಮಾರುಕಟ್ಟೆಯಿಂದ ಹಿಂಪಡೆಯಲಾಗಿದೆ ಎಂದು, ಸಚಿವ ದಿನೇಶ ಗುಂಡೂರಾವ ಹೇಳಿದರು.

<><><>

ಸಕಾಲ ಮೂಲಕ, ಸಾರ್ವಜನಿಕರಿಗೆ, ನಿಗದಿತ ಕಾಲಮಿತಿಯಲ್ಲಿ, 182 ಆನ್ಲೈನ್ ಸೇವೆಗಳನ್ನು ಒದಗಿಸುವಲ್ಲಿ, ವಿಶೇಷ ಶ್ರಮ ವಹಿಸಿದ, ವಿಜಯನಗರ ಜಿಲ್ಲೆ, ಕಳೆದ ಜುಲೈ ತಿಂಗಳಲ್ಲಿ, ಅರ್ಜಿಗಳ ವಿಲೇವಾರಿಯಲ್ಲಿ, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ. ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಮಾಹಿತಿ ನೀಡಿ, ಜಿಲ್ಲೆಯಲ್ಲಿ ಸಕಾಲ ಮೂಲಕ, ಒಟ್ಟು 85 ಸಾವಿರದ 978 ಅರ್ಜಿಗಳು ಸ್ವೀಕೃತವಾಗಿವೆ. ಆ ಪೈಕಿ, 84 ಸಾವಿರದ 904 ಅರ್ಜಿಗಳನ್ನು, ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಲಾಗಿದೆ ಎಂದರು.

<><><>

ಕೇಂದ್ರ ಪುರಸ್ಕೃತ, ಆರ್ಥಿಕ ಸೇರ್ಪಡೆಯ, ಪ್ರಧಾನಮಂತ್ರಿ ಜೀವನ ಜ್ಯೋತಿ, ಜೀವನ ಸುರಕ್ಷಾ ವಿಮೆ ಯೋಜನೆಗಳು ಹಾಗೂ ಸಾಮಾಜಿಕ ಭದ್ರತೆಯ, ಅಟಲ್ ಪಿಂಚಣಿ ಯೋಜನೆ, ಜನ ಸಾಮಾನ್ಯರಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ ಒದಗಿಸುತ್ತಿವೆ.

ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲೂಕು, ಹನುಮಸಾಗರದ ಜನ ಜಾಗೃತಿ ಅಭಿಯಾನದಲ್ಲಿ ಪಾಲ್ಗೊಂಡಿದ್ದ, ಶಶಿಕಲಾ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶಶಿಕಲಾ ಧ್ವನಿ 33 ಸೆಕೆಂದುಗಳು

<><><>

ಉತ್ತರಕನ್ನಡ ಜಿಲ್ಲೆ, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಕೈಬಿಡುವಂತೆ, ಜಿಲ್ಲೆಯ ಜನಪ್ರತಿನಿಧಿಗಳು, ಪರಿಸರ ತಜ್ಞರ ನಿಯೋಗ, ಮುಖ್ಯಮಂತ್ರಿಯವರನ್ನು ಶೀಘ್ರ ಭೇಟಿ ಮಾಡಿ, ಮನವಿ ಸಲ್ಲಿಸಲಿದೆ ಎಂದು, ಪರಿಸರವಾದಿ ಅನಂತ ಹೆಗಡೆ ಅಶೀಸರ, ತಿಳಿಸಿದ್ದಾರೆ. ಭೂಗತ ಯೋಜನೆ, ಪಶ್ಚಿಮ ಘಟ್ಟದ ಅರಣ್ಯ, ಜೀವ ವೈವಿಧ್ಯಕ್ಕೆ ಮಾರಕವಾಗಲಿದೆ. ಸಿಂಹ ಬಾಲದ

ಸಿಂಗಳೀಕದಂತಹ ಅಪರೂಪದ ವನ್ಯಜೀವಿ ಪ್ರಬೇಧಕ್ಕೆ, ಅಳಿವು–ಉಳಿವಿನ ಅಪಾಯ ತಂದೊಡ್ಡಲಿದೆ ಎಂದು, ಕಳವಳ ವ್ಯಕ್ತ ಪಡಿಸಿದ್ದಾರೆ.

<><><>

ರಾಜ್ಯದ ವಿವಿಧೆಡೆ, ಇಂದು ಮತ್ತು ನಾಳೆ, ಭಾರಿ ಮಳೆಯಾಗುವ ಸಂಭವವಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಮುನ್ನೆಚ್ಚರಿಕೆ ನೀಡಿದೆ.

<><><>

ಚಿಕ್ಕಮಗಳೂರು ಸೇರಿದಂತೆ, ಕೊಪ್ಪ, ಕಳಸ ಹಾಗೂ ಮುಳ್ಳಯ್ಯನಗಿರಿ ಶ್ರೇಣಿಯಲ್ಲಿ ಕಳೆದ ಒಂದೂವರೆ ತಿಂಗಳಿನಿಂದ ನಿರಂತರ ಮಳೆಯಾದ ಹಿನ್ನೆಲೆ, ಕಾಫಿ ಹಾಗೂ ಕಾಳು ಮೆಣಸು ಹಾನಿಗೀಡಾಗುವ ಆತಂಕ, ಬೆಳೆಗಾರರಿಗೆ ಎದುರಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಕೆರೆಗಳ ಹರವು ವಲಯದ, ವೈಜ್ಞಾನಿಕ ಅಧ್ಯಯನ, ಒಟ್ಟು ವಿಸ್ತೀರ್ಣ ನಿಗದಿಗೆ, ಕ್ರಮವಹಿಸಿದ, ಪ್ರಥಮ ರಾಜ್ಯ, ಕರ್ನಾಟಕ.

- ಕೇಂದ್ರ ಪುರಸ್ಕೃತ, ಸ್ವದೇಶ ದರ್ಶನ ಹಾಗೂ ಪ್ರಸಾದ್ ಯೋಜನೆ; ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದ, ಪ್ರವಾಸಿ–ತೀರ್ಥ ಕ್ಷೇತ್ರಗಳ ಅಭಿವೃದ್ಧಿ.

- ಖಾದ್ಯ ಹಾಗೂ ಔಷಧ ಗುಣಮಟ್ಟ ತಪಾಸಣೆ: ಆರೋಗ್ಯ ಇಲಾಖೆಯಿಂದ, ಮಾಸಿಕ ಅಭಿಯಾನ.

- ಸಕಾಲ ಸೇವೆ; ವಿಜಯನಗರ ಜಿಲ್ಲೆ, ಅರ್ಜಿಗಳ ವಿಲೇವಾರಿಯಲ್ಲಿ, ರಾಜ್ಯಕ್ಕೆ ಪ್ರಥಮ ಸ್ಥಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>